# ಹಾಡುವಳ್ಳಿ ಕ್ಷೇತ್ರದ ಸಾಂಸ್ಕೃತಿಕ ಅಧ್ಯಯನ

## ಸಂಶೋಧನಾ ಕಿರು ಪ್ರಬಂಧ

ಕರ್ನಾಟಕ ವಿಶ್ವ ವಿದ್ಯಾಲಯ
ಧಾರವಾಡ

ಸ್ನಾತ್ತಕೋತ್ತರ ಕನ್ನಡ ಪದವಿ


ಸಂಶೋಧಕರು

ಕಲ್ಪನಾ ಎನ್. ನಾಯ್ಕ

ರಜಿಸ್ಟರ್ ನಂ : **18A01004**

ಮಾರ್ಗದರ್ಶಕರು

ಡಾ॥ ಸುರೇಶ ಎನ್. ನಾಯ್ಕ

ಕನ್ನಡ ಉಪನ್ಯಾಸಕರು,
ಅಂಜುಮನ್ ಕನ್ನಡ ಸ್ನಾತ್ತಕೋತ್ತರ ಕೇಂದ್ರ,
ಭಟ್ಕಳ, (ಉತ್ತರ ಕನ್ನಡ)


ಕರ್ನಾಟಕದ ವಿಶ್ವವಿದ್ಯಾಲಯದ ಎಂ.ಎ. ಪದವಿಯ
4 ನೇ ಸೆಮಿಸ್ಟರ್‌ಗಾಗಿ ಒಪ್ಪಿಸಿದ ಕಿರು ಪ್ರಬಂಧ


ಅಂಜುಮನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾ ವಿದ್ಯಾಲಯ
ಹಾಗೂ ಸ್ನಾತ್ತಕೋತ್ತರ ಕೇಂದ್ರ ಭಟ್ಕಳ (ಉ.ಕ) – 581320

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಮೇ– 2020

ಕರ್ನಾಟಕ ವಿಶ್ವ ವಿದ್ಯಾಲಯ.

ಧಾರವಾಡ

# ಪ್ರಮಾಣ ಪತ್ರ

**"ಹಾಡುವಳ್ಳಿ ಕ್ಷೇತ್ರದ ಸಾಂಸ್ಕೃತಿಕ ಅಧ್ಯಯನ"** ಎಂಬ ಸಂಶೋಧನಾ ಕಿರು ಪ್ರಬಂಧವನ್ನು ನಮ್ಮ ವಿದ್ಯಾರ್ಥಿನಿಯಾದ **ಕಲ್ಪನಾ ಎನ್. ನಾಯ್ಕ.** ಇವರು ಎಂ. ಎ. ಕನ್ನಡ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಡಾ॥ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡಕ್ಕೆ ಸಾದರ ಪಡಿಸಿದ್ದಾರೆ. ಪ್ರಸ್ತುತ ಕಿರು ಪ್ರಬಂಧ ಈ ಮೊದಲು ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ : 15/9/2020

ಸ್ಥಳ : ಭಟ್ಕಳ

ಡಾ॥ ಸುರೇಶ ಎನ್. ನಾಯ್ಕ

ಉಪನ್ಯಾಸಕರು,

ಅಂಜುಮನ್ ಸ್ನಾತ್ತಕೋತ್ತರ ಕೇಂದ್ರ

ಭಟ್ಕಳ, (ಉ.ಕ.).

# ಪರಿವಿಡಿ


| ಅ.ನಂ | ವಿಷಯ | ಪುಟಗಳ ಸಂಖ್ಯೆ |
|---|---|---|
| ೧ | **ಅಧ್ಯಾಯ – ೧**<br>**ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ**<br>೧.೧. ಅಧ್ಯಯನದ ಉದ್ದೇಶ<br>೧.೨. ಸ್ವರೂಪ<br>೧.೩. ವ್ಯಾಪ್ತಿ | ೨ - ೪ |
| ೨ | **ಅಧ್ಯಾಯ – ೨**<br>**ಹಾಡುವಳ್ಳಿಯ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆ**<br>೨.೧. ಹಾಡುವಳ್ಳಿ ಗ್ರಾಮ<br>೨.೨. ಹಾಡುವಳ್ಳಿಯ ಚರಿತ್ರೆ<br>೨.೩. ಹಾಡುವಳ್ಳಿಯ ಭೌಗೋಳಿಕತೆ | ೫ - ೯ |
| ೩ | **ಅಧ್ಯಾಯ – ೩**<br>**ಹಾಡುವಳ್ಳಿಯನ್ನಾಳಿದ ಅರಸರು ಮತ್ತು ಆಡಳಿತ ಕ್ರಮ**<br>೩.೧. ಸಾಳುವ ದೊರೆಗಳು<br>ಅ) ಸಾಳುವೇಂದ್ರ<br>ಆ) ಸಂಗೀರಾಯ<br>ಇ) ಇಂದಗರಸ<br>ಈ) ದೇವರಾಯ<br>೩.೨. ರಾಣಿ ಚೆನ್ನಾದೇವಿ ಅಮ್ಮ<br>೩.೩. ರಾಣಿ ಭೈರಾದೇವಿ | ೧೦-೨೨ |
| ೪ | **ಅಧ್ಯಾಯ – ೪**<br>**ಸಾಹಿತ್ಯ-ಕಲೆ ಹಾಗೂ ವಾಸ್ತುಶಿಲ್ಪಗಳು**<br>೪.೧. ಸಾಹಿತ್ಯ-ಕಲೆ<br>೪.೨. ವಾಸ್ತುಶಿಲ್ಪಗಳು<br>ಅ) ಮೂರ್ತಿಶಿಲ್ಪಗಳು<br>ಆ) ಲೋಹಶಿಲ್ಪಗಳು<br>ಇ) ಶಾಸನಗಳು | ೨೩-೨೭ |
| ೫ | **ಅಧ್ಯಾಯ – ೫**<br>**ಹಾಡುವಳ್ಳಿಯ ಧಾರ್ಮಿಕ ಅಧ್ಯಯನ**<br>೫.೧. ಪದ್ಮಾವತಿ ದೇವಿ ಬಸದಿ<br>೫.೨. ಚಂದ್ರಗಿರಿ– ಇಂದ್ರಗಿರಿ | ೨೭-೨೯ |
| ೬ | **ಅಧ್ಯಾಯ – ೬**<br>**ಹಾಡುವಳ್ಳಿಯ ಸಾಂಸ್ಕೃತಿಕ ಅಧ್ಯಯನ** | ೩೦-೩೧ |
| ೭ | **ಅಧ್ಯಾಯ – ೭**<br>**ಇಂದಿನ ಸಂಗೀತಪುರ (ಹಾಡುವಳ್ಳಿ)** | ೩೨-೩೩ |
| ೮ | **ಅಧ್ಯಾಯ – ೮**<br>ಸಮಾರೋಪ | ೩೪-೩೫ |
| ೯ | **ಅನುಬಂಧ** 1<br>ಛಾಯಾ ಚಿತ್ರಗಳು<br>**ಅನುಬಂಧ** 2<br>ಪರಾಮರ್ಶಿತ ಗ್ರಂಥಗಳು | ೩೬-೪೩ |

# ಅಧ್ಯಾಯ - ೧

## ಹಾಡುವಳ್ಳಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

### ೧.೧ ಅಧ್ಯಯನದ ಉದ್ದೇಶ

ಗತಕಾಲದ ಮಾನವ ಜೀವನದ ಮಹತ್ವದ ಘಟನಾವಳಿಗಳಿಂದ ಕಾಲಾನುಕ್ರಮದ ನಿರೂಪಣೆಯೇ ಇತಿಹಾಸ. ಇತಿಹಾಸದ ಮೂಲಗಳು ಎಂದರೆ ಗತಕಾಲದ ಮಾನವ ಜೀವನ ಕ್ರಮದ ಬಗ್ಗೆ ಮಾಹಿತಿ ನೀಡುವ ಅವಶೇಷಗಳು ಮತ್ತು ಲಿಖಿತ ದಾಖಲೆಗಳು ಚರಿತ್ರಾಕಾರನು ಲಭ್ಯವಿರುವ ಚರಿತ್ರೆಯ ಮೂಲಾಧಾರಗಳಿಂದ ಐತಿಹಾಸಿಕ ಮಾಹಿತಿಯನ್ನು ಸಂಗ್ರಹಿಸಿ ಪರಿಶೀಲಿಸಿ ಸಮುಚಿತ ದೃಷ್ಟೀಕೋನದಿಂದ ಅರ್ಥೈಸಿ ಚರಿತ್ರೆಯನ್ನು ಸುಸಂಗತವಾಗಿ ನಿರೂಪಿಸುತ್ತಾರೆ. ನಿಜವಾದ ಇತಿಹಾಸಕಾರನು ನಿಷ್ಪಕ್ಷಪಾತಿಯಾಗಿರುತ್ತಾನೆ ಯಾವುದೇ ಜನಾಂಗದ ಬಗ್ಗೆ ಐತಿಹಾಸಿಕ ಮೂಲಗಳು ಸಂಪೂರ್ಣವಾಗಿ ಅಲಭ್ಯವಾದಲ್ಲಿ ಆ ಜನಾಂಗದ ಇತಿಹಾಸ ರಚನೆ ಅಸಾಧ್ಯವಾಗುತ್ತದೆ. ಒಂದು ವೇಳೆ ಮೂಲಾಧಾರಗಳು ತೀರ ವಿರಳವಾಗಿ ಸಮಗ್ರ ಇತಿಹಾಸ ರಚನೆ ಸಾಧ್ಯವಾಗುವುದು.

ಒಟ್ಟಿನಲ್ಲಿ ದೇಶದ ಇತಿಹಾಸವು ಲಭ್ಯವಿರುವ ಐತಿಹಾಸಿಕ ಮೂಲಗಳಿಗೆ ಸೀಮಿತವಾಗಿರುವುದು. ಭಟ್ಕಳದಲ್ಲಿ ಆಡಳಿತ ನಡೆಸಿದಂತಹ ಅನೇಕ ರಾಜಮನೆತನಗಳ ಬಗ್ಗೆ ವಿಸ್ತಾರವಾಗಿ ತಿಳಿದುಕೊಳ್ಳುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ ಹಾಗೂ ಹಾಡುವಳ್ಳಿಯಲ್ಲಿ ಲಭ್ಯವಿರುವ ಕೆಲವು ಬಸದಿ, ದೇವಸ್ಥಾನಗಳು, ಜಿನಬಿಂಬಗಳು, ಇಪ್ಪತ್ನಾಲ್ಕು ತೀರ್ಥಂಕರ ವಿಗ್ರಹಗಳು ಇವುಗಳ ಮೂಲಕ ಅಲ್ಲಿನ ಸಾಂಸ್ಕೃತಿಕ ನೆಲೆಯ ವಿಷಯವನ್ನು ಅರಿತುಕೊಳ್ಳುವ ಉದ್ದೇಶವನ್ನು ಹೊಂದಿದೆ.

# ಅಧ್ಯಾಯ – ೮

## ಸಮಾರೋಪ :

ಗತವೈಭವವನ್ನು ಸಾರಿ ಹೇಳುವ ಹಾಡುವಳ್ಳಿಯ ಚಿತ್ರಣವು ಮನತುಂಬುವಂತ್ತಿತ್ತು, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನಲ್ಲಿರುವ ಒಂದು ರಾಜ್ಯವಾದ ಹಾಡುವಳ್ಳಿಯ ಅಧ್ಯಯನವು ಅಲ್ಲಿನ ವೈಭವವನ್ನು ತಿಳಿಸಿಕೊಡುತ್ತದೆ. ಇತಿಹಾಸದ ಪುಟವನ್ನು ಸೇರಿಕೊಂಡಿರುವ ಸಂಗೀತಪುರವನ್ನು ಮತ್ತೆ ಕಾಣಸಿಗುವುದು ಅಲ್ಲಿಯ ಅಧ್ಯಯನದಿಂದ ಮಾತ್ರ ಸಾಧ್ಯ ಎನ್ನಬಹುದು.

ಕ್ರಿ.ಶ. ೧೩೨೫ ರ ಸುಮಾರಿಗೆ ಹುಟ್ಟಿಕೊಂಡ ಹಾಡುವಳ್ಳಿ ರಾಜ್ಯ ಕ್ರಿ.ಶ ೧೫೨೦ ರ ಸುಮಾರಿಗೆ ತನ್ನ ಅವನತಿಯನ್ನು ಕಂಡಿತ್ತು. ಇದು ಇನ್ನೂರು ವರ್ಷಗಳು ಆಳಿದ ರಾಜ-ರಾಣಿಯರ ವೈಭವದ ರಾಜ್ಯವಾಗಿತ್ತು. ವಿಜಯನಗರದ ಅರಸರು ಈ ರಾಜ್ಯದ ಬಗ್ಗೆ ವಿಶ್ವಾಸವನ್ನು ಹೊಂದಿದ್ದರು. ಸಾಳುವೇಂದ್ರ ದೊರೆಯಿಂದ ಪ್ರಾರಂಭವಾದ ಆಳ್ವಿಕೆಯು ರಾಣಿ ಚೆನ್ನಾ ಭೈರಾದೇವಿಯ ಆಡಳಿತದಲ್ಲಿ ಕೊನೆಗೊಳ್ಳುತ್ತದೆ.

ಸಾಹಿತ್ಯ ಕಲೆ, ವಾಸ್ತುಶಿಲ್ಪಗಳು, ಮೂರ್ತಿ ಶಿಲ್ಪ, ಲೋಹಶಿಲ್ಪಗಳ ಕೆತ್ತನೆಯು ಅದ್ಭುತ ರೀತಿಯಲ್ಲಿ ಕೆತ್ತಲ್ಪಟ್ಟಿದೆ. ಕೆಲವು ಶಾಸನಗಳು ಇಲ್ಲಿ ದೊರೆತವೆ ರಾಮಾಚಾರಿಯ ಮಗ ಕೇಶವಾಚಾರಿ, ಸಂಗೀರಾಯನ ಕಾಲದ ಕೆತ್ತನೆಗಾರರು ಎನ್ನುವುದು ಕೆಲವು ದಾಖಲೆಗಳು ತಿಳಿಸುತ್ತದೆ.

ಪ್ರಕೃತಿಯ ಮಡಿಲು ಇಲ್ಲಿ ಬಹಳ ವಿಶೇಷವಾಗಿದೆ ಎನ್ನಬಹುದು. ಎರಡೂ ಗುಡ್ಡಗಳ ಮೇಲಿನ ಬಸದಿಗಳು ಸಂಗೀತಪುರದ ಕಥೆಯನ್ನು ತಿಳಿಸುತ್ತದೆ. ಒಂದು ಬೆಟ್ಟದಲ್ಲಿ ನಡೆಯುವ ಸಕಾರ್ಯಕ್ರಮ,